ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂ.ಎಫ್.ಸಿ;ರವರ ನ್ಯಾಯಾಲಯದಲ್ಲಿ
ಚಿಕ್ಕನಾಯಕನಹಳ್ಳಿ.

ದಿನಾಂಕಃ20ನೇ ಏಪ್ರಿಲ್ 2018 ರಂದು.

ಅಪರಾದ ಮೊಕದ್ದಮೆ ಸಂಖ್ಯೆ.229/2015

| | |
|---|---|
| ಉಪಸ್ಥಿತರು | ಶ್ರೀಮತಿ ಪ್ರಮೀಳ ಎಂ., ಬಿ.ಕಾಂ, ಎಲ್.ಎಲ್.ಬಿ;<br>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.,<br>ಚಿಕ್ಕನಾಯಕನಹಳ್ಳಿ. |
| ಪಿರ್ಯಾದುದಾರರುಃ | ರಾಜ್ಯದ ಪರವಾಗಿ<br>ಆರಕ್ಷಕ ಉಪನಿರೀಕ್ಷಕರು,<br>ಚಿಕ್ಕನಾಯಕನಹಳ್ಳಿ ಪೋಲೀಸ್ ಠಾಣೆ,<br>ಚಿಕ್ಕನಾಯಕನಹಳ್ಳಿ.<br><br>(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿಅಭಿಯೋಜಕರು) |
| ಆರೋಪಿತರುಃ | 1) ಮಲ್ಲಿಕಾರ್ಜುನಯ್ಯ ಬಿನ್ ಲೇಟ್ ಗೋವಿಂದಪ್ಪ<br>ಸುಮಾರು 76 ವರ್ಷ, **(ಮೃತಪಟ್ಟಿರುತ್ತಾನೆ)**<br><br>2) ಜಗದೀಶ್ ಬಿನ್ ಮಲ್ಲಿಕಾರ್ಜುನಯ್ಯ,<br>ಸುಮಾರು 45 ವರ್ಷ,<br><br>3) ಚನ್ನೇಗೌಡ ಬಿನ್ ಮಲ್ಲಿಕಾರ್ಜುನಯ್ಯ,<br>ಸುಮಾರು 35 ವರ್ಷ,<br><br>4) ಯೋಗಮ್ಮ ಕೋಂ ಜಗದೀಶ,<br>ಸುಮಾರು 44 ವರ್ಷ,<br><br>5) ಸುವರ್ಣಮ್ಮ ಕೋಂ ಮಲ್ಲಿಕಾರ್ಜುನಯ್ಯ<br>ಸುಮಾರು 65 ವರ್ಷ,<br><br>ಆರೋಪಿತರೆಲ್ಲರೂ ಜೆ.ಸಿ.ಪುರ ಗ್ರಾಮ ವಾಸ,<br>ಶೆಟ್ಟಿಕೆರೆ ಹೋಬಳಿ,<br>ಚಿಕ್ಕನಾಯಕನಹಳ್ಳಿ ತಾಲ್ಲೋಕು. |
| ಅಪರಾಧ ನಡೆದ ದಿನಾಂಕಃ | 02.11.2014. |
| ಅಪರಾಧವನ್ನು ವರದಿ ಮಾಡಿದ ದಿನಾಂಕಃ | 05.11.2014. |

| | |
|---|---|
| ಆರೋಪಿಯನ್ನು ದಸ್ತಗಿರಿ | 23.12.2014. |
| ಫಿರ್ಯಾದುದಾರರ ಹೆಸರು | ಗಂಗಾಧರಯ್ಯ |
| ಸಾಕ್ಷ್ಯ ವಿಚಾರಣೆ ಮಾಡಲು ಪ್ರಾರಂಭಿಸಿದ ದಿನಾಂಕ | 13.04.2018. |
| ಸಾಕ್ಷಿ ವಿಚಾರಣೆ ಮುಕ್ತಾಯಗೊಂಡ ದಿನಾಂಕ | 13.04.2018. |
| ಅಪರಾಧಿಸಲ್ಪಟ್ಟ ಅಪರಾಧಗಳು | **ಭಾರತೀಯ ದಂಡ ಸಂಹಿತೆ ಕಲಂ.143, 147, 148, 323, 324 , 504 ಸಹವಾಚಕ ಕಲಂ.149** |
| ನ್ಯಾಯಾಧೀಶರ ಅಭಿಪ್ರಾಯ | **ಆರೋಪ ರುಜುವಾತಾಗಿಲ್ಲ.** |
| ರಾಜ್ಯದ ಪರವಾಗಿ | **ಸಹಾಯಕ ಸರ್ಕಾರಿ ಅಭಿಯೋಜಕರು.** |
| ಆರೋಪಿ ಪರವಾಗಿ | **ಶ್ರೀ. ಎಂ.ಎನ್.ಶೇಖರಯ್ಯ, 2 ರಿಂದ 5ನೇ ಆರೋಪಿತರ ಪರ ವಕೀಲರು.<br>1ನೇ ಆರೋಪಿತನು ಮೃತಪಟ್ಟಿರುತ್ತಾನೆ.** |

(ಪ್ರಮೀಳ. ಎಂ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ;
ಚಿಕ್ಕನಾಯಕನಹಳ್ಳಿ.

**ಃತೀರ್ಪುಃ**

ಚಿಕ್ಕನಾಯಕನಹಳ್ಳಿ ಪೋಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು 1 ರಿಂದ 5ನೇ ಆರೋಪಿತರ ವಿರುದ್ಧ ಭಾರತ ದಂಡ ಸಂಹಿತೆ ಕಲಂ**.143, 147, 148, 323, 324, 504 ಸಹವಾಚಕ ಕಲಂ.149** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಕೆಳಕಂಡಂತೆ ಇದೆಃ-**

ದಿನಾಂಕ**:**02/11/2014 ರಂದು ಚಿಕ್ಕನಾಯಕನಹಳ್ಳಿ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಶೆಟ್ಟಿಕೆರೆ ಹೋಬಳಿ, ಜೆ.ಸಿ ಪುರ ಗ್ರಾಮದ 1ನೇ ಆರೋಪಿಯ ಮನೆಯ ಪಕ್ಕದ ಹಳೆಯ ಮನೆಯ ಹತ್ತಿರ ದೊಂಬಿ ಮಾಡುವ ಸಾಮಾನ್ಯ ಉದ್ದೇಶವನ್ನು ಹೊಂದಿ ಆರೋಪಿತರೆಲ್ಲರೂ ಅಕ್ರಮ ಕೂಟ ಕಟ್ಟಿಕೊಂಡು ಚಾಸಾ-2 ರವರ ಪಾಲಿನ ತೋಟದಲ್ಲಿ ಕಾಯಿ ಕಿತ್ತ ವಿಚಾರವಾಗಿ ಜಗಳ ತೆಗೆದು ಬಾಯಿಗೆ ಬಂದಂತೆ ಚಾಸಾ-2ರವರಿಗೆ

ಸೂಳೆ ಮುಂಡೆ, ಹಾದರಗಿತ್ತಿ ಮುಂಡೆ ಎಂದು ಬೈದು, 2ನೇ ಆರೋಪಿ ಕುಡುಗೋಲಿನಿಂದ ಚಾಸಾ-2 ರವರ ತಲೆಯ ಹಿಂಭಾಗಕ್ಕೆ ಹೊಡೆದು ರಕ್ತಗಾಯಪಡಿಸಿ ಮೈಕೈಗೆ ಕೈಯಿಂದ ಹೊಡೆದಿರುತ್ತಾರೆ. 3ನೇ ಆರೋಪಿ ಚಾಸಾ-2 ರವರಿಗೆ ದೊಣ್ಣೆಯಿಂದ ಬಲಗಾಲಿಗೆ ಮತ್ತು ಎಡಕಾಲಿಗೆ ಹೊಡೆದು ನೋವುಪಡಿಸಿರುತ್ತಾರೆ. 1ನೇ ಆರೋಪಿತನು ಚಾಸಾ.2 ರವರಿಗೆ ಅವ್ಯಾಚ್ಯ ಶಬ್ದಗಳಿಂದ ಬೈದಿರುತ್ತಾರೆ. 4 ಮತ್ತು 5ನೇ ಆರೋಪಿತರು ಚಾಸಾ-2 ರವರ ಜುಟ್ಟು ಹಿಡಿದು ಎಳೆದಾಡಿ ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ. ಆ ಮೂಲಕ ಭಾರತ ದಂಡ ಸಂಹಿತೆ ಕಲಂ.**143, 147, 148, 323, 324, 504 ಸಹವಾಚಕ ಕಲಂ.149**ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

3. ತನಿಖಾಧಿಕಾರಿಗಳು ತನಿಖಾ ಕಾರ್ಯ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯ ಭಾರತ ದಂಡ ಸಂಹಿತೆ ಕಲಂ.**143, 147, 148, 323, 324, 504 ಸಹವಾಚಕ ಕಲಂ.149**ರಡಿಯಲ್ಲಿ ಅಪರಾಧಗಳಿವೆ. ಅಪರಾಧಕ್ಕೆ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ಬಳಿಕ 1ನೇ ಆರೋಪಿತನು ಮೃತಪಟ್ಟಿರುತ್ತಾರೆ. ಆದ್ದರಿಂದ ಅವನ ವಿರುದ್ಧ ಪ್ರಕರಣವನ್ನು ಕೊನೆಗೊಳಿಸಲಾಗಿದೆ.

4 .ದಿನಾಂಕ:7/2/15 ರಂದು ಆರೋಪಿತರು ತಮ್ಮ ವಕೀಲರ ಮೂಲಕ ಜಾಮೀನು ಅರ್ಜಿಯನ್ನು ಸಲ್ಲಿಸಿ, ಜಾಮೀನು ಪಡೆದುಕೊಂಡಿರುತ್ತಾನೆ. ದಂಡ ಪ್ರಕ್ರಿಯಾ ಸಂಹಿತೆ 207ರಂತೆ ಆರೋಪಿತರಿಗೆ ದೊಷಾರೋಪಣಾ ಪಟ್ಟಿಯ ನಕಲನ್ನು ಜಾರಿಗೊಳಿಸಿದೆ. ಆರೋಪ ರಚಿಸುವ ಕಾಲಕ್ಕೆ ಭಾರತ ದಂಡ ಸಂಹಿತೆ ಕಲಂ.**143, 147, 148, 323, 324, 504 ಸಹವಾಚಕ ಕಲಂ.149**ರಡಿಯಲ್ಲಿ 2 ರಿಂದ 5ನೇ ಆರೋಪಿತರನ್ನು ವಿಮೋಚನೆ ಮಾಡಲು ಯಾವುದೇ ಸಕಾರಣಗಳು ಈ ನ್ಯಾಯಾಲಯಕ್ಕೆ ಕಂಡು ಬರದ ಕಾರಣ 2 ರಿಂದ 5ನೇ ಆರೋಪಿತರ ಮೇಲೆ ದೋಷರೋಪಣೆಯನ್ನು ಭಾರತ ದಂಡ ಸಂಹಿತೆ ಕಲಂ. ಕಲಂ.**143, 147, 148, 323, 324, 504 ಸಹವಾಚಕ ಕಲಂ.149**ರ ರೀತ್ಯಾ ರಚಿಸಲಾಯಿತು.

5. ಅಭಿಯೋಜನಾ ಪಕ್ಷದವರು ಆರೋಪಿತರ ವಿರುದ್ದ ಮಾಡಿರುವ ಆರೋಪಗಳನ್ನು ರುಜುವಾತು ಪಡಿಸಲು ತಮ್ಮ ಪರವಾಗಿ ಒಟ್ಟು 2 ಜನ ಸಾಕ್ಷಿಯನ್ನು ಪ್ರಾ.ಸಾ.1 ಮತ್ತು ಪ್ರಾಸಾ.2 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಹಾಗೂ ನಿಶಾನೆ ಪಿ.1 ಮತ್ತು ಪಿ.2ರಲ್ಲಿ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

6. ಪ್ರಾ.ಸಾ.1 ಮತ್ತು ಪ್ರಾಸಾ.2ರವರು ಅಭಿಯೋಜನೆಗೆ ವಿರುದ್ದವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ, ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರಡಿಯಲ್ಲಿನ ಆರೋಪಿತರ ಹೇಳಿಕೆ ದಾಖಲಿಸುವುದನ್ನು ಕೈಬಿಡಲಾಗಿದೆ.

7. ಉಭಯ ಪಕ್ಷಕಾರರ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ಮೊಕದ್ದಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು.

8. ಅಭಿಯೋಜನೆ ಪಕ್ಷದವರು ಆರೋಪಿತರ ವಿರುದ್ದ ಮಾಡಿರುವ ಆಪಾದನೆಯ ರೀತ್ಯಾ ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿದೆ.

**ಅಂಶ ಸಂಖ್ಯೆ.1)** ದಿನಾಂಕಃ 02-11.2014 ರಂದು ಬೆಳಿಗ್ಗೆ ಸುಮಾರು 10-00 ಗಂಟೆ ಸಮಯದಲ್ಲಿ ಚಿಕ್ಕನಾಯಕನಹಳ್ಳಿ ಠಾಣಾ ಸರಹದ್ದಿಗೆ ಸೇರಿದ ಜೆ.ಸಿ.ಪುರದ ಮೃತನಾಗಿರುವ 1ನೇ ಆರೋಪಿಯ ಮನೆಯ ಪಕ್ಕದ ಹಳೆ ಮನೆಯ ಮುಂದೆ ಆರೋಪಿತರೆಲ್ಲರೂ ಅಕ್ರಮ ಗುಂಪುಕಟ್ಟಿಕೊಂಡು , ದೊಂಬಿ ಮಾಡುವ ಏಕೊದ್ದೇಶದಿಂದ ಚಾಸಾ-2 ರವರ ಮೇಲೆ ಜಗಳ ಮಾಡಲು ಬಂದಿದ್ದು , ಸದರಿ ಕೃತ್ಯವು ಭಾರತ ದಂಡ ಸಂಹಿತೆ ಕಲಂ 143,147,148 ಸಹವಾಚಕ ಕಲಂ 149 ರಡಿಯಲ್ಲಿ ಆರೋಪಿತರು ಶಿಕ್ಷಾರ್ಹವಾದ ಅಪರಾಧ ಮಾಡಿದ್ದಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತುಪಡಿಸುತ್ತದೆಯೇ?

**ಅಂಶ ಸಂಖ್ಯೆ.2)** ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರೆಲ್ಲರೂ ಚಾಸಾ.2 ರವರ ಪಾಲಿನ ತೋಟದಲ್ಲಿ ಕಾಯಿ ಕಿತ್ತ ವಿಚಾರಕ್ಕೆ ಜಗಳ ತೆಗೆದು ಬಾಯಿಗೆ ಬಂದಂತೆ ಸೂಳೆ ಮುಂಡೆ, ಹಾದರಗಿತ್ತಿ ಮುಂಡೆ, ಎಂದು ಅವ್ಯಾಚ್ಯ ಶಬ್ದಗಳಿಂದ ಬೈದು ಗಲಾಟೆ ಮಾಡಿದ್ದು , ಸದರಿ ಕೃತ್ಯವು ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ರಡಿಯಲ್ಲಿ ಆರೋಪಿತರು ಶಿಕ್ಷಾರ್ಹವಾದ ಅಪರಾಧ ಮಾಡಿದ್ದಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತುಪಡಿಸುತ್ತದೆಯೇ?

**ಅಂಶ ಸಂಖ್ಯೆ.3)** ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 2ನೇ ಆರೋಪಿತನು ಚಾಸಾ.2 ರವರಿಗೆ ತಲೆ ಹಿಂಭಾಗಕ್ಕೆ ಕುಡುಗೋಲಿನಿಂದ ಹೊಡೆದು ರಕ್ತಗಾಯ ಪಡಿಸಿದ್ದು ಮತ್ತು ಮೈಕೈಗೆ ಕೈಯಿಂದ ಹೊಡೆದಿದ್ದು , 3ನೇ ಆರೋಪಿತನು ದೊಣ್ಣೆಯಿಂದ ಬಲಗಾಲಿಗೆ ಮತ್ತು ಎಡಗಾಲಿಗೆ ಹೊಡೆದು ನೋವುಂಟು ಮಾಡಿದ್ದು, 4 ಮತ್ತು 5ನೇ ಆರೋಪಿತರು ಜುಟ್ಟು ಹಿಡಿದು ಎಳೆದಾಡಿ ಕೈಗಳಿಂದ ಹೊಡೆದು ನೋವುಂಟು ಮಾಡಿದ್ದು , ಸದರಿ ಕೃತ್ಯವು ಭಾರತ ದಂಡ ಸಂಹಿತೆ ಕಲಂ 323, 324 ಸಹವಾಚಕ ಕಲಂ 149ರಡಿಯಲ್ಲಿ ಆರೋಪಿತರು ಶಿಕ್ಷಾರ್ಹವಾದ ಅಪರಾಧ ಮಾಡಿದ್ದಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತುಪಡಿಸುತ್ತದೆಯೇ?

**ಅಂಶ ಸಂಖ್ಯೆ.4)** ಏನೆಂದು ಆದೇಶ ಆಗಬೇಕು ?

**9.** ಮೇಲ್ಕಂಡ ಅಂಶಗಳಿಗೆ ಈ ನ್ಯಾಯಾಲಯದ ಉತ್ತರಗಳು ಕೆಳಕಂಡಂತೆ ಇವೆ-

**ಅಂಶ ಸಂಖ್ಯೆ.1 - ನಕಾರಾತ್ಮಕವಾಗಿ.**

**ಅಂಶ ಸಂಖ್ಯೆ.2 - ನಕಾರಾತ್ಮಕವಾಗಿ.**

**ಅಂಶ ಸಂಖ್ಯೆ.3 - ನಕಾರಾತ್ಮಕವಾಗಿ.**

**ಅಂಶ ಸಂಖ್ಯೆ.4 – ಅಂತಿಮ ಆದೇಶದಂತೆ,**

ಕೆಳಕಂಡ ಕಾರಣಗಳಿಗಾಗಿ.

**:ಕಾರಣಗಳು:**

**10.** ಅಂಶ ಸಂಖ್ಯೆ.1 ರಿಂದ 3 **:** ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಒಂದರ ಅಂಶದ ಮೇಲಿನ ಚರ್ಚೆಯು ಮತ್ತೊಂದು ಅಂಶಗಳಲ್ಲಿನ ಚರ್ಚೆಯಲ್ಲಿ ಪುನರಾವರ್ತನೆಯಾಗುವ ಕಾರಣದಿಂದ, ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ಪ್ರಕರಣದಲ್ಲಿ ಆರೋಪಿತರ ವಿರುದ್ದ ಮಾಡಿರುವ ಆರೋಪಗಳನ್ನು ನಿಸ್ಸಂದೇಹವಾಗಿ ರುಜುವಾತು ಪಡಿಸುವ ಜವಾಬ್ದಾರಿ ಅಭಿಯೋಜನಾ ಪಕ್ಷದವರ ಮೇಲಿದ್ದು, ಪ್ರಕರಣವನ್ನು ರುಜುವಾತುಪಡಿಸುವ ಸಲುವಾಗಿ ಒಟ್ಟು 8 ಸಾಕ್ಷಿಗಳ ಪೈಕಿ ಚಾಸಾ.1 ಮತ್ತು ಚಾಸಾ.2 ಪಿರ್ಯಾದಿ ಮತ್ತು ಗಾಯಾಳು ಸಾಕ್ಷಿಗಳನ್ನು ಪ್ರಾಸಾ.1 ಮತ್ತು ಪ್ರಾಸಾ.2 ಅಂತ ವಿಚಾರಣೆಗೆ ಒಳಪಡಿಸಲಾಗಿದೆ. ಈ ಪ್ರಕರಣದಲ್ಲಿ ಪ್ರಾ.ಸಾ.1 ರವರು ಪಿರ್ಯಾದುದಾರರಾಗಿದ್ದು , ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತರಿಗೂ ತಮಗೂ ಯಾವುದೇ ಜಗಳವಾಗಿಲ್ಲ, ನಿಶಾನೆ ಪಿ.1 ಮತ್ತು ಪಿ.2ರಲ್ಲಿರುವ ಸಹಿಯನ್ನು ಒಪ್ಪುತ್ತಾರೆ. ಆದರೆ ಸದರಿ ಸಹಿಗಳನ್ನು ಯಾವ ವಿಚಾರಕ್ಕೆ ಹಾಕಿದ್ದು ಮತ್ತು ಅದರಲ್ಲಿರುವ ಅಂಶಗಳು ಗೊತ್ತಿಲ್ಲವೆಂದು ಸಾಕ್ಷ್ಯ ನುಡಿಯುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪ್ರಾ.ಸಾ.1 ಪಿರ್ಯಾದುದಾರರನ್ನು ಪಾಟೀಸವಾಲು ಮಾಡಿದಾಗ್ಯೂ ಸಹ ಪ್ರಾ.ಸಾ.1 ರವರು ದೂರು ಮತ್ತು ಮಹಜರ್‌ನಲ್ಲಿರುವ ಸಹಿಯನ್ನು ಹೊರತುಪಡಿಸಿ ಉಳಿದಂತೆ ನಿಶಾನೆ ಪಿ.1 ಮತ್ತು ಪಿ.2ರಲ್ಲಿರುವ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

12. ಚಾಸಾ-2ರವರು ಗಾಯಾಳುವಾಗಿದ್ದು ಸದರಿಯವರನ್ನು ಪ್ರಾ.ಸಾ.2 ಎಂದು ವಿಚಾರಣೆಗೆ ಒಳಪಡಿಸಿದ್ದು ಪ್ರಾ.ಸಾ.2ರವರು ಆರೋಪಿತರು ತನ್ನ ಜೊತೆ ಜಗಳವಾಡಿಲ್ಲ, ನನಗೆ ಹೊಡೆದಿಲ್ಲ, ಹಾಗೆಯೇ ಪೋಲೀಸರಿಗೆ ತಾನು ಹೇಳಿಕೆಯನ್ನು ಕೊಟ್ಟಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಮುಂದುವರೆದು ನ್ಯಾಯಾಲಯದ ಮುಂದಿರುವ ಕುಡುಗೋಲು ಮತ್ತು ದೊಣ್ಣೆಯನ್ನು ಗುರುತಿಸಲು ಸಾಧ್ಯವಿಲ್ಲ ಎಂದು ನುಡಿದಿರುತ್ತಾರೆ. ಮಾನ್ಯ ಸಹಾಯಕ

ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀಸವಾಲು ಮಾಡಿದಾಗ್ಯೂ ಸಹ ಸಹಾಯಕ ಸರ್ಕಾರಿ ಅಬಿಯೋಜಕರ ಸೂಚನೆಯನ್ನು ಅಲ್ಲಗಳೆದಿರುತ್ತಾರೆ.

13. ಈ ಪ್ರಕರಣದಲ್ಲಿ ಆರೋಪಿತರು ಭಾರತ ದಂಡ ಸಂಹಿತೆ ಕಲಂ.**143, 147, 148, 323, 324, 504 ಸಹವಾಚಕ ಕಲಂ.149**ರಡಿಯಲ್ಲಿ ಅಪರಾಧ ಮಾಡಿದ್ದಾರೆ ಎಂದು ಸಾಭೀತುಪಡಿಸುವ ಸಲುವಾಗಿ ಸಾಕ್ಷಿ ವಿಚಾರಣೆ ಮಾಡಿದಾಗ ಪ್ರಾ.ಸಾ.1 ಮತ್ತು ಪ್ರಾ.ಸಾ-2 ಪಿರ್ಯಾದಿ ಮತ್ತು ಪ್ರತ್ಯಕ್ಷ ಸಾಕ್ಷಿಯಾಗಿದ್ದು ಪ್ರಾಸಾ.1 ರವರು ತನ್ನ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿಲ್ಲ, ತಾನು ಪಿರ್ಯಾದನ್ನು ನೀಡಿಲ್ಲ, ಹಾಗೆಯೇ ಯಾವುದೇ ಹೇಳಿಕೆಯನ್ನು ಪೋಲೀಸರು ತೆಗೆದುಕೊಂಡಿಲ್ಲ, ಸದರಿಯವರ ಸಾಕ್ಷ್ಯಕ್ಕೆ ಪುಷ್ಟಿ ಕೊಡುವಂತೆ ಪ್ರತ್ಯಕ್ಷ/ಗಾಯಾಳು ಸಾಕ್ಷಿ ಪ್ರಾ.ಸಾ.2ರವರೂ ಸಹ ಯಾವುದೇ ಗಲಾಟೆ ನಡೆದಿಲ್ಲ, ಈ ಪ್ರಕರಣದ ಬಗ್ಗೆ ತನಗೇನೂ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಎಲ್ಲಾ ವಿದ್ಯಾಮಾನಗಳನ್ನು ಗಮನಿಸಿದಾಗ ಆರೋಪಿತರೆಲ್ಲರೂ ದೊಂಬಿ ಮಾಡುವ ಉದ್ಧೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಚಾಸಾ-2ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, 2ನೇ ಆರೋಪಿ ಕುಡುಗೋಲಿನಿಂದ ಚಾಸಾ-2 ರವರ ತಲೆಯ ಹಿಂಭಾಗಕ್ಕೆ ಹೊಡೆದು ರಕ್ತಗಾಯಪಡಿಸಿ ಮೈಕೈಗೆ ಕೈಯಿಂದ ಹೊಡೆದಿದ್ದು , 3ನೇ ಆರೋಪಿ ಚಾಸಾ-2 ರವರಿಗೆ ದೊಣ್ಣೆಯಿಂದ ಬಲಗಾಲಿಗೆ ಮತ್ತು ಎಡಕಾಲಿಗೆ ಹೊಡೆದು, 1 ಮತ್ತು 2ನೇ ಆರೋಪಿತರು ಅವ್ಯಾಚ್ಯ ಶಬ್ದಗಳಿಂದ ಬೈದಿರುತ್ತಾರೆ. 4 ಮತ್ತು 5ನೇ ಆರೋಪಿತರು ಚಾಸಾ-2 ರವರ ಜುಟ್ಟು ಹಿಡಿದು ಎಳೆದಾಡಿ ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ ಎಂಬುದನ್ನು ನಿಸ್ಸಂದೇಹವಾಗಿ ಸಾಬೀತುಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ. ಆದ್ದರಿಂದ ಆರೋಪಿತರು ಸಂಶಯದ ಲಾಭವನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದ್ದರಿಂದ ಅಂಶ ಸಂಖ್ಯೆ.1 ರಿಂದ 3ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

14. **ಅಂಶ ಸಂಖ್ಯೆ.4**: ಈ ಮೇಲೆ ಚರ್ಚಿಸಿ ನಿರ್ಣಯಕ್ಕೆ ಬಂದ ಕಾರಣಗಳಿಗೋಸ್ಕರ, ಕೆಳಕಂಡಂತೆ ಆದೇಶಿಸಿದೆ-

## ಆ ದೇ ಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರಡಿಯಲ್ಲಿ ನ್ಯಾಯಾಲಯಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 2 ರಿಂದ 5ನೇ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ.143, 147, 148, 323, 324, 504, ಸಹವಾಚಕ ಕಲಂ.149ರಡಿಯಲ್ಲಿನ ದಂಡನೀಯ ಅಪರಾಧಗಳಿಗೆ ನಿರ್ದೋಷಿ ಎಂದು ತೀರ್ಮಾನಿಸಿ ಖುಲಾಸೆಗೊಳಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 437ಎ ರ ರೀತ್ಯ ಪ್ರಕರಣದ ಆರೋಪಿತರು ಮತ್ತು ಜಾಮೀನುದಾರರ ಮುಚ್ಚಳಿಕೆಗಳನ್ನು 6 ತಿಂಗಳವರೆವಿಗೆ ಚಾಲ್ತಿಯಲ್ಲಿರಿಸಲು ಈ ಮೂಲಕ ಆದೇಶಿಸಲಾದೆ.

ಪ್ರಕರಣದ ಪಿಎಫ್ ಸಂಖ್ಯೆ.94:2014 ದಿನಾಂಕ:6.11.2014ರಲ್ಲಿ ನಮೂದಿಸಲಾದ ಐಟಂ ಸಂಖ್ಯೆ.1 ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

ಪ್ರಕರಣದ ಪಿಎಫ್ ಸಂಖ್ಯೆ.94:2014 ದಿನಾಂಕ:6.11.2014ರಲ್ಲಿ ನಮೂದಿಸಲಾದ ಐಟಂ ಸಂಖ್ಯೆ.2 ಮೇಲ್ಮನವಿ ಅವಧಿ ಮುಗಿದ ನಂತರ ಸರ್ಕಾರಕ್ಕೆ ಮಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸಲಾಗಿದೆ.

(ಶೀಘ್ರಲಿಪಿಗಾರನಿಗೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿದ ನಂತರ ಪರಿಶೀಲಿಸಿ, ತಿದ್ದಿ, ಬಳಿಕ ಬಹಿರಂಗ ನ್ಯಾಯಾಲಯದಲ್ಲಿ ಇಂದು ಅಂದರೆ ದಿನಾಂಕ:20ನೇ ಏಪ್ರಿಲ್ 2018ರಂದು ಉದ್ಘೋಷಿಸಲಾಗಿದೆ.)

(ಪ್ರಮೀಳ. ಎಂ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ;
ಚಿಕ್ಕನಾಯಕನಹಳ್ಳಿ.

## ಅನುಬಂಧ

1. **ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳ ವಿವರ:-**

ಪ್ರಾಸಾ.1 : ಗಂಗಾಧರಯ್ಯ

ಪ್ರಾಸಾ.2 : ಅನ್ನಪೂರ್ಣಮ್ಮ

2. **ಅಭಿಯೋಜನೆ ಪರ ಹಾಜರುಪಡಿಸಿದ ದಾಖಲಾತಿಗಳ ವಿವರ:-**

ನಿ.ಪಿ.1 - ದೂರು
ನಿ.ಪಿ.1(ಎ) - ಪ್ರಾಸಾ.1 ರವರ ಸಹಿ.
ನಿ.ಪಿ.2 - ಮಹಜರ್
ನಿ.ಪಿ.2(ಎ) - ಪ್ರಾಸಾ.1 ರವರ ಸಹಿ.

3. **ಅಭಿಯೋಜನೆ ಪರ ಗುರುತಿಸಲಾದ ಮುದ್ದೆಮಾಲುಗಳ ವಿವರ:-**

-ಇಲ್ಲಾ-

4. **ಆರೋಪಿತರ ಪರ ವಿಚಾರಣೆ ಮಾಡಿದ ಸಾಕ್ಷಿಗಳ ವಿವರ:-**

-ಇಲ್ಲಾ-

5. **ಆರೋಪಿತರ ಪರ ಹಾಜರುಪಡಿಸಲಾದ ದಾಖಲಾತಿಗಳ ವಿವರ :-**

-ಇಲ್ಲಾ-

6. **ಆರೋಪಿತರ ಪರ ಗುರುತಿಸಲಾದ ಮುದ್ದೆಮಾಲುಗಳ ವಿವರ:-**

-ಇಲ್ಲಾ-

(ಪ್ರಮೀಳ.ಎಂ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ;
ಚಿಕ್ಕನಾಯಕನಹಳ್ಳಿ.